ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 64-69.
©*IIMRD*, Mysuru.
IIMRD JOURNALS
www.iimrd.com

# ವಚನ ಸಾಹಿತ್ಯದಲ್ಲಿ ಶರಣಸ್ಥಲ

**ಜಗನ್ನಾಥ.ಎನ್* ಮತ್ತು ಡಾ. ನಾಗರಾಜ.ಪಿ****

*ಸಂಶೋಧಕರು, ಕನ್ನಡ ವಿಭಾಗ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.

**ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.

***ಸಾರಾಂಶ: (Abstract)***

*ಹನ್ನೆರಡನೆ ಶತಮಾನದಲ್ಲಿ ಜರುಗಿದ ವಚನ ಸಾಹಿತ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಶರಣರೆಲ್ಲರು ವೈಚಾರಿಕ ಪ್ರಜ್ಞೆಯುಳ್ಳವರಾಗಿದ್ದರು. ಅವರ ಚಿಂತನೆಗಳು ಮಹೋನ್ನತವಾದ ಸಾಮಾಜಿಕ ಎಚ್ಚರಗಳಿಂದ ಕೂಡಿವೆ. ವಚನಕಾರರು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದವರಾಗಿದ್ದರು, ಶರಣರ ಪ್ರಜಾಸತ್ತಾತ್ಮಕ ಅಲೋಚನೆಗಳಿಂದ ಸರ್ವ ಸಮಾನತೆಯ ಸಮಾಜವನ್ನು ಕಟ್ಟಲು ಪ್ರಯತ್ನಿಸಿ ಯಶಸ್ವಿಯಾದರು. ಅಂದರೆ ನಾವು ಗಮನಿಸಬೇಕಾಗಿರುವುದು ಅಂದು ನಡೆದದ್ದು ಕೇವಲ ಒಂದು ಸುಧಾರಣೆಯಲ್ಲ, ಚಳುವಳಿಯಲ್ಲ, ಒಂದು ಕ್ರಾಂತಿ ಎಂಬುದನ್ನು ಶರಣರು ತಮ್ಮ ಕಾಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಆಲೋಚಿಸಿ ಮತ್ತು ಅನುಷ್ಠಾನಕ್ಕೂ ತಂದಿದ್ದರಿಂದ ಆ ಯುಗ ಇನ್ನೂ ಕಾಲ ಪಕ್ವವಾಗಿಲ್ಲದ್ದರಿಂದ ಆ ಕ್ರಾಂತಿಯ ಯಶಸ್ಸು ಅಲ್ಪಾವಧಿಯಾದದ್ದು ಅನಿವಾರ್ಯವಾಯಿತು. ಅಂದು ಶರಣರು ಹರಿಯಿಸಿದ ವಿಚಾರಧಾರೆ ಅಂದಿನ ಸಮಾಜಕ್ಕೆ ಮಾತ್ರವಲ್ಲದೆ ಎಲ್ಲಾ ಕಾಲಕ್ಕೂ ಮಾರ್ಗದರ್ಶನವನ್ನು ನೀಡುವ ಶಕ್ತಿಯನ್ನು ಪಡೆದಿದೆ. ಏಕೆಂದರೆ ಅವರು ಧರ್ಮದ ವಿಚಾರದಲ್ಲಾಗಲೀ, ಸಾಮಾಜಿಕ ವಿಚಾರದಲ್ಲಾಗಲೀ, ಅಂಧ ಶ್ರದ್ದೆಯನ್ನು ತೊಡೆದು ಹಾಕಿ ಜೀವನದ ಹೋರಾಟಕ್ಕೆ ನೂತನವಾದ ಉತ್ತರವನ್ನು ಕಂಡು ಕೊಂಡಿದ್ದಾರೆ, ಶರಣರು ತಮಗೆ ಸತ್ಯವೆನಿಸಿದುದನ್ನು ಯಾವ ದಾಕ್ಷಿಣ್ಯವೂ ಇಲ್ಲದೆ ಪ್ರತಿಪಾದಿಸಿದರು. ಅನೇಕ ಸಂದರ್ಭಗಳಲ್ಲಿ ಅವರ ನಿಷ್ಠುರವಾದ ನುಡಿಗಳು ಸಂಪ್ರದಾಯಬದ್ಧ ಸಮಾಜವಾದಿಗಳನ್ನು ಕೆರಳಿಸಿದವು, ಸತ್ಯವನ್ನು ಸಾರಿದ ಅವರ ನುಡಿಗಳು ಮುಂದಿನ ದಿನಗಳಲ್ಲಿ ಕ್ರಾಂತಿಕಾರಕವಾಗಿ ಪರಿಣಮಿಸಿದವು. ಧರ್ಮಕ್ಕೆ, ಸಮಾಜಕ್ಕೆ ಅಂಟಿದ ಕೊಳೆಯನ್ನು ತೊಡೆದು ಹಾಕುವಲ್ಲಿ ಶರಣರ ವಿಚಾರಧಾರೆಗಳು ಎಲ್ಲಾ ಕಾಲಕ್ಕೂ ಅರ್ಥಪೂರ್ಣವಾಗಿವೆ. ಶರಣರ ವಚನಗಳು ವೈಶಿಷ್ಟ್ಯ ಪೂರ್ಣವಾಗಿದ್ದು ಪ್ರೇರಕ ಶಕ್ತಿಯಾಗಿವೆ.*

***ಮುಖ್ಯಪದಗಳು:(Keywords)*** *ವಚನ ಸಾಹಿತ್ಯ, ಶಿವಶರಣರು, ಶರಣಸ್ಥಲ, ಬಸವಣ್ಣ, ಸಾಮಾಜಿಕ ಕ್ರಾಂತಿ.*

**ಪೀಠಿಕೆ**

ವಚನ ಎಂದರೆ ಮಾತು, ಭಾಷೆ, ಪ್ರಮಾಣ ಎಂಬ ಅರ್ಥಗಳಿವೆ. ಆದ್ಯರ ಅಥವಾ ಪುರಾತನರ ಮಾತು ಎಂಬ ಅರ್ಥ ಕೂಡ ಇದೆ. "ಚನ್ನಬಸವಣ್ಣ ಹೇಳುವಂತೆ ಶಬ್ದಸೋಪಾನದ ಬಲದಿಂದ ನಿಶಬ್ದ ಸೋಪಾನವ ಕಟ್ಟಿ ನಡೆಸಿದವರು, ನಮ್ಮ ಪುರಾತನರು. ಶಿವಶರಣರ ಅನುಭಾವದ ನುಡಿ ದೇವಲೋಕಕ್ಕೆ ದಾರಿಯೆಂದೂ, ಭಕ್ತರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿಟ್ಟರೆಂದೂ

*Please cite this article as: ಜಗನ್ನಾಥ. ಎನ್. ಮತ್ತು ಡಾ. ನಾಗರಾಜ. ಪಿ.* (2022). ವಚನ ಸಾಹಿತ್ಯದಲ್ಲಿ ಶರಣಸ್ಥಲ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 64–69.*

ಅವನು ಹೇಳುವನು. ಜ್ಞಾನದೀಪ್ತಿಯನ್ನು ಬೆಳಗುವ ತೈಲವಾವುದೆಂದರೆ ಶಿವಶರಣರ ನುಡಿಗಡಣದ ಒಸರು, ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ. ಅದು ತಾನೆಂಬ ನಿಶ್ಚಯವ ತೋರುವುದು. ಹೀನ ಜಡತೆಯ ಮುಸುಕಿನ ಗ್ರಂಥಿಯನಳಿವುದು, ಭಾನು ಬಂದಡೆ ಕತ್ತಲೆ ಹರಿವಂತೆ ಬುಧರೊಳು ನೀನಿರಲು ಕರ್ಮ ಹರಿವುದು ಎಂದೂ ಅವನು ಹೇಳುವನು." ಈ ಮೇಲಿನ ಅಂಶಗಳನ್ನು ಆವಲೋಕಿಸಿದಾಗ ಶರಣರ ಅನುಭಾವದ ನೆಲೆಗಳಲ್ಲಿ ವೈಚಾರಿಕ ಚಿಂತನೆಗಳನ್ನು ಕಂಡುಕೊಳ್ಳಬಹುದು.

ವಚನ ವೈಚಾರಿಕತೆಗೆ ತನ್ನದೇ ಆದ ಒಂದು ಪರಂಪರೆಯಿದೆ. ಆ ಪರಂಪರೆ ಬಹುಮುಖ್ಯವಾಗಿ ಶರಣರಿಂದ ಪ್ರಾರಂಭವಾಗುತ್ತದೆ. ವಚನ ಸಾಹಿತ್ಯದ ಕಾಲವು ಸಂಕ್ರಮಣ ಕಾಲವಾಗಿದ್ದರಿಂದ ಅಲ್ಲಿ ನೆಡದ ವಿಚಾರ ಸಂಘರ್ಷ ಇಂದಿಗೂ ಪ್ರಸ್ತುತವಾಗುತ್ತದೆ. ಹೆಣ್ಣು–ಹೊನ್ನು–ಮಣ್ಣುಗಳಿಗಾಗಿ ಬಡೆದಾಡುತ್ತಾ ರಾಜ ಮಹಾರಾಜರ ಬದುಕೇ ನಮ್ಮ ಇತಿಹಾಸದಲ್ಲಿ ವಿಜೃಂಭಿಸುತ್ತಿರುವಾಗ ಶರಣರ ವಿಚಾರಧಾರೆಗಳು ವಿಶಿಷ್ಟವಾಗಿ ಕಾಣುತ್ತವೆ. ವಚನಕಾರರು ವೈಚಾರಿಕ ಪರಂಪರೆಗೆ ಮೂಲ ಪುರುಷರಾಗುತ್ತಾರೆ. ಬಹಳ ಮುಖ್ಯವಾಗಿ ವೈಚಾರಿಕ ಪ್ರಜ್ಞೆ ಬೆಳೆದ ಮೇಲೆ ಮನುಷ್ಯನಲ್ಲಿ ಪ್ರಚಾರಕ್ಕಿಂತ ವಿಚಾರ ಪ್ರಧಾನವಾಗಬೇಕು, ಮಾತಿಗಿಂತ ಕೃತಿ ಮುಖ್ಯವಾಗಬೇಕು. ಆಗ ವ್ಯಕ್ತಿ ನಿಷ್ಠವಾದದ್ದು ವಸ್ತು ನಿಷ್ಠವಾಗುತ್ತದೆ, ಢಾಂಬಿಕತೆ, ಸ್ವಾರ್ಥ, ಸಣ್ಣತನದಿಂದ ಕೂಡಿದ ಮನಸ್ಸು ವಿಚಾರ ಸಂಘರ್ಷದಲ್ಲಿ ತೊಡಗಿದಾಗ ಅವನ ಆಲೋಚನೆಗಳು ಉನ್ನತವಾಗಿ ಬೆಳೆದು ಶರಣರ ಆಚಾರ–ವಿಚಾರಗಳನ್ನು ಸಮನ್ವಯಗೊಳಿಸಿ ವ್ಯಕ್ತಿ ಕಲ್ಯಾಣಕ್ಕೆ ಕಾರಣವಾಗುತ್ತವೆ.

ಅನೇಕ ವಿದ್ವಾಂಸರು ಶಿವಶರಣರ ಸಾಹಿತ್ಯವನ್ನು ಆಧರಿಸಿ ಹಲವು ಬಗೆಯ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಆಧುನಿಕ ಸಂದರ್ಭದಲ್ಲೂ ಸಹ ಇಂತಹ ಹಲವು ರೀತಿಯಾದ ಅಧ್ಯಯನಗಳನ್ನು ನಡೆಸಿದ್ದಾರೆ. ಇವು ಶೈಕ್ಷಣಿಕ ಅಗತ್ಯಗಳಿಗನುಗುಣವಾಗಿ ಬಂದಿವೆ. ಹಲವು ಮಠ ಮಾನ್ಯಗಳು ಹಾಗೂ ಧರ್ಮಸಂಸ್ಥೆಗಳು ಮತ್ತೆ ಕೆಲವು ವೈಯಕ್ತಿಕ ಆಸಕ್ತಿಗಳ ಕಾರಣವಾಗಿಯು ಶರಣರ ವಚನಗಳ ಕುರಿತಾದ ಸಾಹಿತ್ಯ ಸೃಷ್ಟಿಯಾಗಿದೆ. ಈ ರೀತಿಯಾದ ವಚನ ಸಾಹಿತ್ಯಕ್ಕೆ ಶರಣರ ವೈಚಾರಿಕ ಚಿಂತನೆಗಳಾವುವು? ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ಹಾಗೂ ಆಧ್ಯಾತ್ಮಿಕ ವಿಚಾರಗಳು ಹೇಗೆ ರೂಪುಗೊಂಡವು? ಶರಣರ ಷಟ್ ಸ್ಥಲಗಳ ಪರಿಕಲ್ಪನೆ ಹಾಗು ಶರಣ ಸ್ಥಲ ಆಚರಣೆಗಳಾವುವು? ಅವರ ನಡೆ ನುಡಿಗಳಿಗೆ ಸೈದ್ಧಾಂತಿಕ ನೆಲೆಗಟ್ಟುಗಳಾವುವು? ಇವುಗಳಿಗೆ ಯಾವ ರೀತಿಯಾಗಿ ಪ್ರತಿಕ್ರಿಯಿಸಿದ್ದಾರೆ? ಹೀಗೆ ಹಲವು ಪ್ರಶ್ನೆಗಳಿಗೆ ಈ ಲೇಖನದಲ್ಲಿ ಉತ್ತರ ಕಂಡುಕೊಳ್ಳಬಹುದಾಗಿದೆ.

ಒಂದು ಸೈದ್ಧಾಂತಿಕ ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟು ಬಹಳ ಮುಖ್ಯ, ನಿರ್ದಿಷ್ಟವಾದ ಚೌಕಟ್ಟು ಇದ್ದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಒಳಗೊಂಡಿದೆ. ಹನ್ನೆರಡನೆ ಶತಮಾನದ ವಚನ ಸಾಹಿತ್ಯದಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರ ವಚನಗಳ ನ್ನು ಗುರಿಯಾಗಿಸಿಕೊಂಡು ಅಧ್ಯಯನ ನಡೆಸಲಾಗುವುದು, ಶರಣ ಸ್ಥಲ ವ್ಯಾಪ್ತಿ ವಿಶಾಲವಾಗಿದ್ದು, ಅಂದಿನಿಂದ ಇಂದಿನವರೆಗೆ ಶರಣರ ಚಿಂತನೆಗಳನ್ನು ಕುರಿತು ಅಧ್ಯಯನ ಮಾಡುವಾಗ ಪ್ರಸ್ತುತ ಸಂದರ್ಭದಲ್ಲಿ ಕೆಲವೊಂದು ರಾಜಕೀಯ, ಸಾಮಾಜಿಕ, ಹಾಗೂ ಧಾರ್ಮಿಕ ಅಂಶಗಳೊಂದಿಗೆ ಸಮಕಾಲೀನ ಪಂಥಗಳ ಜೊತೆಗೆ ಚರ್ಚಿಸಿ ವಿಶ್ಲೇಷಣೆಗೆ ಒಳಪಡಿಸಲಾಗುವುದು.

ಶರಣಸ್ಥಲ ಕುರಿತ ವಚನಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು. ಹನ್ನೆರಡನೆಯ ಶತಮಾನದ ವಚನಕಾರರಾದ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ದರಾಮ, ಅಕ್ಕಮಹಾದೇವಿ ಮುಂತಾದ ವಚನಕಾರರ ವಚನಗಳಲ್ಲಿ ಷಟ್ಸ್ಥಲಗಳಲ್ಲೊಂದಾದ ಶರಣ ಸ್ಥಲ ಪರಿಕಲ್ಪನೆಯನ್ನು ವೈಚಾರಿಕ ವಿಮರ್ಶೆಗೆ ಒಳಪಡಿಸಿ ವಿವೇಚಿಸಲಾಗುವುದು. ಶರಣಸ್ಥಲವನ್ನು ಕುರಿತಾದ ವೈಚಾರಿಕ ಪ್ರತಿಪಾದನೆ ಮತ್ತು ವಿವೇಚನೆ, ಪ್ರಗತಿ ಪರತೆ, ಶರಣಸ್ಥಲದ ನಿರೂಪಣೆ, ವ್ಯಕ್ತಿತ್ವ ನಿರ್ವಚನ, ಇಂದಿನ ಆಚರಣೆಗಳಲ್ಲಿ ಶರಣಸ್ಥಲದ ಮಹತ್ವ ಶರಣರ ಆನುಭಾವಿಕ ನೆಲೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗುವುದು.

**ಶರಣರ ಷಟ್ಸ್ಥಲ ಪರಿಕಲ್ಪನೆ**

ವೀರಶೈವ ಧರ್ಮದಲ್ಲಿ **"ಸ್ಥಲ"** ಎಂಬ ಪದ ವಿಶಿಷ್ಟವಾದ ಅರ್ಥವನ್ನುಳ್ಳ ಪಾರಿಭಾಷಿಕ ಪದವಾಗಿದೆ. ಷಟ್ಸ್ಥಲಗಳನ್ನು ಗಮನಿಸಿದಾಗ ಸ್ಥಲ ಎಂಬುದು ಸಾಧಕನ ಸಿದ್ದಿಯನ್ನು ಪಡೆಯುವ ಮಾರ್ಗದಲ್ಲಿನ ಹಂತ ಎಂಬ ಅರ್ಥವನ್ನು ಕಾಣಬಹುದು. ಹರಿಹರನು ಸಹ ತನ್ನ ರಗಳೆಗಳ ಪರಿಚ್ಛೇಗಳಿಗೂ ಸ್ಥಲವೆಂದೇ ಹೆಸರಿಸಿದ್ದಾನೆ. ಕೆಲವು ವೀರಶೈವ ಧರ್ಮ ಗ್ರಂಥಗಳಲ್ಲಿ ಸ್ಥಲಕ್ಕೆ ವಿಶೇಷ ಅರ್ಥವನ್ನು ಒಳಗೊಂಡಿದೆ. ಈ ಶಬ್ದದ ಮೊದಲ ಅಕ್ಷರವು ಸ್ಥಿತಿಯನ್ನು ಎರಡನೆಯದು ಲಯವನ್ನು ಸೂಚಿಸಿ, ಇವುಗಳಿಗೆ ಕಾರಣಿಭೂತವಾದ ಶಕ್ತಿಯನ್ನು ಈ ಎರಡು ಅಕ್ಷರುಗಳು ಸೇರಿದಾಗ ಸೂಚಿಸುತ್ತವೆ ಎಂದು ವ್ಯಾಖ್ಯಾನಿಸುತ್ತವೆ. ಅಂದರೆ ಒಂದೇ ಆದ ಸ್ಥಲವು ತನ್ನ ಶಕ್ತಿಯ ಪ್ರಭೆಯಿಂದಾಗಿ ಅಂಗ ಸ್ಥಲ ಮತ್ತು ಲಿಂಗಸ್ಥಲಗಳೆಂದು ಎರಡಾಯಿತು. ಆ ಅಂಗಸ್ಥಲವೆ ತ್ಯಾಗಾಂಗ ಭೋಗಾಂಗ ಯೋಗಾಂಗವೆಂದು ಮೂರು ತೆರನಾಯಿತು. ಆ ಲಿಂಗಸ್ಥಲವೆ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂದು ಮೂರು ತೆರನಾಯಿತು, ಅಂಗಸ್ಥಲತ್ರಯದಲ್ಲಿ ತ್ಯಾಗಾಂಗವೆ ಭಕ್ತ ಮಾಹೇಶ್ವರರೆಂದೂ, ಭೋಗಾಂಗವೆ ಪ್ರಸಾದಿ ಪ್ರಾಣಲಿಂಗಿಯೆಂದೂ, ಯೋಗಾಂಗವೇ ಶರಣ ಐಕ್ಯರೆಂದೂ ಎರಡೆರಡು ವಿಧವಾಯಿತು, ಲಿಂಗಸ್ಥಲತ್ರಯದಲ್ಲಿ ಇಷ್ಟಲಿಂಗವೆ ಆಚಾರಲಿಂಗ ಗುರುಲಿಂಗವೆಂದೂ, ಪ್ರಾಣಲಿಂಗವೆ ಶಿವಲಿಂಗ ಜಂಗಮಲಿಂಗವೆಂದೂ, ಭಾವಲಿಂಗವೆ ಪ್ರಸಾದಲಿಂಗ ಮಹಾಲಿಂಗವೆಂದೂ ಎರಡೆರಡು ವಿಧವಾಯಿತು ಎಂದು ಶರಣರು ಆಚರಣೆಯಲ್ಲಿ ತಂದರು.

ಅಂಗವು ಲಿಂಗದಲ್ಲಿ ಸಾಮರಸ್ಯವನ್ನು ಪಡೆಯಲು ನಡೆಸುವ ಸಾಧನೆ ಆರು ಹಂತಗಳಲ್ಲಾಗುತ್ತದೆಂದು ಆ ಸಾಧನೆಯನ್ನು ಆರು ಹಂತಗಳಲ್ಲಿ ಶರಣರು ಗುರುತಿಸುತ್ತಾರೆ. ಅವುಗಳೆಂದರೆ, ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲ, ಆದರೆ ದೀರ್ಘವಾದ ಸಾಧನ ಮಾರ್ಗದಲ್ಲಿ ಒಂದು ಸ್ಥಲದಿಂದ ಮತ್ತೊಂದು ಸ್ಥಲದವರೆಗಿನ ಮಾರ್ಗದಲ್ಲಿ ಬೆಳವಣಿಗೆಯು ಸತತವಾಗಿರುವುದರಿಂದ, ಆ ಬೆಳವಣಿಗೆಯನ್ನು ಮತ್ತಷ್ಟು ಸೂಕ್ಷ್ಮವಾಗಿ ತೋರಿಸಲು ಈ ಆರು ಸ್ಥಲಗಳಲ್ಲಿ ಮತ್ತೆ ವಿಭಾಗಗಳನ್ನು ಮಾಡುತ್ತಾರೆ.

ಷಟ್‌ಸ್ಥಲ ವ್ಯವಸ್ಥೆಯಲ್ಲಿ ಒಂದಕ್ಕಿಂತ ಹೆಚ್ಚು ಬಗೆಗಳಿವೆ, ಇದಕ್ಕನುಗುಣವಾಗಿ ಚನ್ನಬಸವಣ್ಣನವರ ಹೆಸರಿನ ವಚನ ಕಟ್ಟುಗಳು, ಪ್ರಭುದೇವರ ವಚನ ಕಟ್ಟು, ಬಸವಣ್ಣನ ವಚನ ಕಟ್ಟುಗಳು, ಮಿಶ್ರ ಷಡುಸ್ಥಲಗಳು ಕಂಡುಬರುತ್ತವೆ. ಮುಂದೆ ಹದಿನೈದನೆಯ ಶತಮಾನದ ವಚನ ಸಂಕಲಕಾರರು ವಚನಗಳನ್ನು ನೂರೊಂದು ವಿಭಾಗಗಳಲ್ಲಿ ವಿಂಗಡಿಸಿ, ಆ ವಿಭಾಗಕ್ರಮವನ್ನು 'ಏಕೋತ್ತರಶತಸ್ಥಲ' ವೆಂದು ಕರೆದರು, ಇದನ್ನು ಒಟ್ಟಾರೆ ಅಂಗಷಟ್ಸ್ಥಲ, ಲಿಂಗಷಟ್ ಸ್ಥಲವೆಂದು ಎರಡು ಭಾಗ ಮಾಡಿದರು,

ಮೊದನೆಯ ವಿಭಾಗದಲ್ಲಿ ನಲವತ್ತನಾಲ್ಕು ಸ್ಥಲಗಳೂ ಎರಡನೆಯದರಲ್ಲಿ ಐವತ್ತೇಳು ಸ್ಥಲಗಳೂ ಇರುತ್ತವೆ, ಅಂಗಷಟ್ ಸ್ಥಲದ ಭಕ್ತಸ್ಥಲದಲ್ಲಿ ಹದಿನೈದು ವಿಭಾಗಗಳೂ, ಮಹೇಶ್ವ ರಸ್ಥಲದಲ್ಲಿ ಒಂಭತ್ತು, ಪ್ರಸಾದಿಸ್ಥಲದಲ್ಲಿ ಏಳು, ಪ್ರಾಣಲಿಂಗಿಸ್ಥಲದಲ್ಲಿ ಐದು, ಶರಣಸ್ಥಲದಲ್ಲಿ ನಾಲ್ಕು, ಐಕ್ಯಸ್ಥಲದಲ್ಲಿ ನಾಲ್ಕು ವಿಭಾಗಗಳೂ ಇರುತ್ತವೆ, ಲಿಂಗಷಟ್ ಸ್ಥಲದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂದು ಆರು ಸ್ಥಲಗಳಿರುತ್ತವೆ, ಅವುಗಳಲ್ಲಿ ಕ್ರಮವಾಗಿ ಒಂಭತ್ತು, ಒಂಭತ್ತು, ಹನ್ನೆರಡು,ಒಂಭತ್ತು, ಒಂಭತ್ತು ಉಪ ವಿಭಾಗಗಳಿರುತ್ತವೆ, ಮೇಲೆ ಚನ್ನಬಸವಣ್ಣನು ಮಾಡಿರುವ ಸಾಕಾರ, ನಿರಾಕಾರಗಳೆಂಬ ವಿಭಾಗವೇ ಈ ಅಂಗಸ್ಥಲ, ಲಿಂಗಸ್ಥಲಗಳಿಗೆ ಮೂಲವಾಗಿರಬಹುದು. ಇದಕ್ಕೆ ಪೋಷಕವಾಗಿ ಚನ್ನಬಸವಣ್ಣನು ಮತ್ತೊಂದೆಡೆಯಲ್ಲಿ ಆಚಾರಸ್ಥಲ, ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ, ಮಹಾಸ್ಥಲಗಳನ್ನು ಹೆಸರಿಸುತ್ತಾನೆ. ಇವು 'ಏಕೋತ್ತರಶತಸ್ಥಲ'ದಲ್ಲಿನ ಆರು ಲಿಂಗಸ್ಥಲಗಳೇ ಆಗಿವೆ, ಎಂದರೆ ಏಕೋತ್ತರಶತಸ್ಥಲದ ಕಲ್ಪನೆಯು ವಚನಕಾರರಲ್ಲಯೇ ಇದ್ದಿತೆಂಬಂತೆ ಕಾಣುತ್ತದೆ.

**ಶರಣ ಸ್ಥಲ**

ಶರಣ ಎಂದರೆ ಈ ಪದವು ಲಿಂಗವಂತ, ಶಿವಭಕ್ತ ಎಂಬ ಸಾಮಾನ್ಯ ಅರ್ಥದಲ್ಲೂ, ಷಟ್‌ಸ್ಥಲದ ಐದನೆಯ ಹಂತದಲ್ಲಿ ಜ್ಞಾನಿಯಾದ ಶಿವಭಕ್ತನ ಸ್ಥಿತಿ ಎಂಬ ವಿಶೇಷಾರ್ಥದಲ್ಲೂ ಬಳಕೆಗೊಂಡಿದೆ. ಸಾಧಕ ಕೇವಲ ಜ್ಞಾನ ಪ್ರಾಪ್ತಿಯೊಂದಿಗೆ ಸ್ವಯಂ ಜ್ಞಾನ ಸ್ವರೂಪಿಯಾಗಿರುತ್ತಾನೆ. ಲಿಂಗವೇ ತಾನಾಗಿರುತ್ತಾನೆ. ಅಂದೊಂದು ವಿಶಿಷ್ಟ ಸ್ಥಿತಿ. ಮಾತು ಮತ್ತು ಮನಸ್ಸಿಗೆ ನಿಲುಕದ ಸ್ಥಿತಿ, ಅಂತಹ ಶರಣನ ಕುರಿತು ಅದಯ್ಯನವರು ತಮ್ಮ ಒಂದು ವಚನದಲ್ಲಿ ಹೀಗೆ ವಿವರಿಸಿದ್ದಾರೆ. "ಅಸಾಮಾನ್ಯರೂ, ಆಢ್ಯರೂ, ಅಪ್ರತಿಮರೂ, ಸ್ವತಂತ್ರರೂ, ಸ್ವಲೀಲೆಯಲ್ಲಿರುವರೂ ಆದ ಸೌರಾಷ್ಟ್ರ ಸೋಮೇಶ್ವರನ ಶರಣರು–ಕಡವರ ನುಂಗಿದ ಪೊಡಬಿಯಂತೆ, ರತ್ನವ ನುಂಗಿದ ರತ್ನಾಕರದಂತೆ, ಬೆಳಗ ನುಂಗಿದ ಬಯಲಂತೆ, ಬಣ್ಣವ ನುಂಗಿದ ಪಾಷಾಣದಂತೆ, ತೈಲವ ನುಂಗಿದ ತಿಲದಂತೆ, ಪ್ರತಿಬಿಂಬವ ನುಂಗಿದ ದರ್ಪಣದಂತೆ ಇರುತ್ತಾರೆ. ನಿಮ್ಮ ಶರಣರಲ್ಲಿ ನೀವಿರುವ ರಹಸ್ಯ ನಿಮಗೆ ಗೊತ್ತೆ ಹೊರತು ನನಗೆ ತಿಳಿಯದು" ಎನ್ನುತ್ತಾರೆ. ಅಂದರೆ ಶಿವನೇ ಶರಣನಾದ, ಶರಣನೇ ಶಿವನಾದ ಅಭೇದ ಸ್ಥಿತಿಯದು.

ಲಿಂಗಾಂಗ ಸಾಮರಸ್ಯ ಶರಣಸ್ಥಿತಿ ತಲುಪಬೇಕಾದರೆ, ಸಾಧಕನ ನಡೆ–ನುಡಿ ಒಂದಾಗಿರಬೇಕು, ಸಜ್ಜನಿಕೆ, ಸದುವಿನಯದ ಸಾಕಾರ ಮೂರ್ತಿಯಾಗಿರಬೇಕು, ಪರಧನ, ಪರಸತಿ, ಪರದೈವವನ್ನು ನಿರಾಕರಿಸುವ ಛಲವಿರಬೇಕು, ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯನಾಗಿರಬೇಕು, ಆಶಾಪಾಶ ವಿರಹಿತನಾಗಿರಬೇಕು. ಎಲ್ಲ ರೀತಿಯ ಮದಗಳನ್ನು ಕಿತ್ತೆಸಯಬೇಕು, ಅಂತರಂಗ–ಬಹಿರಂಗಗಳು ನಿರ್ಮಲವಾಗಿರಬೇಕು, ಕಾಯದ ಮತ್ತು ಜೀವದ ಕಳವಳಗಳನ್ನು ಕಳಚಿಕೊಂಡು ಸರ್ವವನ್ನು ಸಮಭಾವದಿಂದ ಸ್ವೀಕರಿಸಬೇಕು, ಅಂದಾಗ ಮಾತ್ರ ಶರಣನಾಗಲು ಸಾಧ್ಯ. ಶರಣರು ಉಪಮಿಸಬಾರದ ಉಪಮಾತೀತರು ಕಾಲ–ಕರ್ಮರಹಿತರು, ಭವ ವಿರಹಿತರು, ಹರಿವ ನದಿಗೆ ಮೈಯೆಲ್ಲ ಕಾಲು, ಉರಿವ ಬೆಂಕಿಗೆ ಮೈಯೆಲ್ಲ ನಾಲಿಗೆ, ಬೀಸುವ ಗಾಳಿಗೆ ಮೈಯೆಲ್ಲ ಮುಖವಾಗಿರುವಂತೆ ಶರಣರ ಸರ್ವಾಂಗವೆಲ್ಲ ಲಿಂಗವಾಗಿರುತ್ತದೆ. ಅಂದರೆ ಶರಣನೇ ಲಿಂಗ, ಲಿಂಗವೇ ಶರಣನಾದ ಸ್ಥಿತಿ, ಮಾನವ ಮಹಾದೇವನಾಗುವ ಸ್ಥಿತಿ, ನರ–ಹರನಾಗುವ ಸ್ಥಿತಿ, ಭಕ್ತ–ಭಗವಂತನಾಗುವ ಸ್ಥಿತಿ, ಮಣ್ಣು–ಮಡಕೆಯಾಗುವ ಸ್ಥಿತಿ, ಬೆಣ್ಣೆ ಕರಗಿ

ತುಪ್ಪವಾಗುವ ಸ್ಥಿತಿ, ನೀರು ಮುತ್ತಾದ ಸ್ಥಿತಿ, ಕಬ್ಬಿಣ ಹೊನ್ನಾದ ಸ್ಥಿತಿ, ಈ ಸ್ಥಿತಿಯನ್ನು ಪಡೆಯಲು ಎಲ್ಲರಿಗೂ ಆಗದೆಂಬುದನ್ನು ಶಿವಯೋಗಿ ಸಿದ್ದರಾಮಯ್ಯನವರ ವಚನದಲ್ಲಿ ಕಾಣಬಹುದು.

*ಬಟ್ಟ ಬಯಲೆಲ್ಲಗಟ್ಟಿಗೊಂಡಡೆ*
*ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ?*
*ಮೇಘ ನಿರ್ಮಲ ಜಲವೆಲ್ಲ ಮುತ್ತಾದಡೆ*
*ಸಪ್ತ ಸಾಗರಗಳಿಗೆ ಉದಕವಿನ್ನೆಲ್ಲಿಯದೊ?*
*ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದಡೆ*
*ಮುಂದೆ ಭವದ ಬಳ್ಳಿ ಬೆಳೆಯಲಿನ್ನೆಲ್ಲಿಯದೋ?*

ಕೂಡಲ ಚೆನ್ನಸಂಗಯ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.' ಚನ್ನಬಸವಣ್ಣನವರ ಈ ಮಾತು ವ್ಯಕ್ತಿ ಕಲ್ಯಾಣಕ್ಕೆ ಸೀಮಿತನಾದವ ಭಕ್ತ ಸಮಾಜಕಲ್ಯಾಣಕ್ಕೆ ವಿಸ್ತಾರಗೊಂಡವ ಶರಣ ಎಂಬ ಅರ್ಥವನ್ನು ಸೂಚಿಸುತ್ತದೆ.

ಶರಣ ಸ್ಥಲದಲ್ಲಿ ಜ್ಞಾನವು ಮಹತ್ ಪಾತ್ರವಹಿಸುತ್ತದೆ, ಶರಣನು ಜ್ಞಾನಿ, ಅವನ ಆಚರಣೆಯ ಹಿಂದಿನ ಅಂತರಾರ್ಥವೆಲ್ಲ ಅವನಿಗೆ ತಿಳಿದಿರುತ್ತದೆ, " ಶರಣಸ್ಥಲ ನೋಡುವಡೆ ಬಹುಸುಲಭ ನೋಡಯ್ಯಾ ಶರಣನು ತಿಳಿದು ತಿಳಿದು ಆಚರಿಪನು, ಜ್ಞಾನದಿಂದ ಭೇದವಿಲ್ಲ ನೋಡಯ್ಯಾ ಎಂಬ ಸಿದ್ದರಾಮನ ಮಾತಿನಲ್ಲಿ ಶರಣನು ಪೂರ್ವದ ದೇಹವನ್ನು ಪಡೆದಿದ್ದರೂ ಹಿಂದಿನಂತೆ ಕ್ರಿಯೆಗಳನ್ನು ಮಾಡುತ್ತಿದ್ದರೂ ತನ್ನ ಕ್ರಿಯೆಯ ಸಂಪೂರ್ಣ ಅರಿವು ಆತನಿಗಿರುತ್ತದೆಂಬ ವಿಷಯವು ಸ್ಪಷ್ಟವಾಗಿದೆ, ಇದನ್ನೇ ಬಸವಣ್ಣ "ಅರಿದಡೆ ಶರಣ ಮರೆದಡೆ ಮಾನವ" ಎಂಬ ಮಾತಿನಲ್ಲಿ ಸೂತ್ರರೂಪವಾಗಿ ಹೇಳಿದ್ದಾನೆ. ಶರಣಸ್ಥಲದ ಪ್ರಮುಖ ಗುಣವೆಂದರೆ ಸತಿ–ಪತಿಭಾವ, ಶರಣನು ಸತಿಯಂತೆ ಲಿಂಗವನ್ನು ಆರಾಧಿಸಬೇಕು, ತನ್ನ ಪ್ರತಿಯೊಂದು ಕ್ರಿಯೆಯು ಲಿಂಗವನ್ನು ಒಲಿಸುವ ಮಾರ್ಗವಾಗಿರುತ್ತದೆ. ಶರಣನಿಗೆ, 'ಸತಿಯುಳ್ಳನ್ನಕ್ಕ ಶರಣನಲ್ಲ' ಚನ್ನಬಸವಣ್ಣನ ಮಾತಿನಲ್ಲಿ ಶರಣನು ತಾನೇ ಸತಿಯಾಗಿರುವುದರಿಂದ ಬೇರೆಯ ಸತಿಯಲ್ಲ ಎಂಬ ಅರ್ಥವಿದೆ. ತನ್ನ ಸತಿಯ ಬಗ್ಗೆ ಶರಣನಿಗಿರುವ ಆಸ್ಥೆ ಅನನ್ಯವಾದುದು.

"ಇವನೊಬ್ಬನೇ ಗುರುವನು, ಇವನೊಬ್ಬನೇ ಚೆಲುವನು, ಇವನೊಬ್ಬನೆ ಧನಪತಿ ಕೇಳು, ಕೆಳದಿ! ಇವಂಗೆ ಹಿರಿಯರಿಲ್ಲ, ಎನಗೆ ಒಡೆಯರಿಲ್ಲ, ಇಂತಪ್ಪ ನಲ್ಲನು ಲೇಸು ಕಾಣಿರೆನಗೆ, ನಾವೆಲ್ಲರೊಂದಾಗಿ ಹಿಡಿದು ಬಿಡಿದಿರೆ ಬಿಡಿವುವವರಿಲ್ಲ, ಲೇಸು ಉರಿಲಿಂಗದೇವ ಎಂಬಂತೆ ಶಿವನನ್ನು ಸೇರುವವನು, ಸೇರುವಿಕೆಯಲ್ಲಿ ಸತಿ–ಪತಿ ಬೇರೆಯಾದವರು ಎಂಬ ಭಾವನೆ ಕ್ವಚಿತ್ತಾಗಿಯಾದರೂ ಇದೆ. ಶಿವನ ಸ್ವರೂಪವನ್ನೇ ಪಡೆದವನು ಶರಣ, "ದೀಪದಿಂದ ದೀಪ ಹುಟ್ಟಿದಲ್ಲಿ ಅವ ಅವ ದೀಪ ಮೊದಲೆಂಬುದು ಕಾಣದಂತೆ, ಸರ್ಪ ಕಚ್ಚಿದ ಮನುಷ್ಯನ ಅಂಗವಿಷ ಒಂದು ಠಾವಿನಲ್ಲಿದೆಯೆಂದು ಕುರುಹಿಡಿಬಾರದಂತೆ, ಲಿಂಗಪ್ರಾಣನಾದ ಶರಣಗೆ ಶರಣಪ್ರಾಣವಾದ ಲಿಂಗಕ್ಕೆ ಭೇದವಿಲ್ಲ ಎಂಬುದು ಶರಣರ ಆಧ್ಯಾತ್ಮಿಕ ಚಿಂತನೆಯಾಗಿದೆ.

**ಉಪಸಂಹಾರ**

ಒಟ್ಟಾರೆ ವಚನ ಸಾಹಿತ್ಯದಲ್ಲಿ ಶರಣರ ಪಾತ್ರ ಹಿರಿದಾದುದು, ಷಟ್ಸ್ಥಲಗಳಲ್ಲಿ ಜ್ಞಾನ ಮತ್ತು ಕ್ರಿಯೆಗಳನ್ನು ಸಮನ್ವಯಗೊಳಿಸಿ, ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ವೈಚಾರಿಕ ದೃಷ್ಟಿಕೋನಗಳಿಗೆ ಬದ್ಧನಾಗಿ ಮುನ್ನಡೆಯಬೇಕೆಂಬುದು ಶರಣರ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಶಿರೂರ. ಬಿ. ವಿ. (2015). ಸಂಶೋಧನ ಸ್ವರೂಪ. ಅನ್ನಪೂರ್ಣ ಪ್ರಕಾಶನ, ಮಂಜುನಾಥ ನಗರ, ಹುಬ್ಬಳ್ಳಿ.
- ಶ್ರೀನಿವಾಸ ಮೂರ್ತಿ. ಎಂ.ಆರ್. (1990). ವಚನ ಧರ್ಮಸಾರ. ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ತಿಪ್ಪೇರುದ್ರಸ್ವಾಮಿ. ಎಚ್. (2016). ಶರಣರ ಅನುಭಾವ ಸಾಹಿತ್ಯ. ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.
- ನಾರಾಯಣ. ಪಿ. ವಿ. (2016). ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ. ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.
- ಕುಮಾರ. ಜೆ. (2016). ನೂರೊಂದು ವಿರಕ್ತರು ಒಂದು ಅಧ್ಯಯನ. ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.
- ವಿದ್ಯಾಶಂಕರ್. ಎಸ್. (1993). ವಚನ ಪರಿಭಾಷಾಕೋಶ. ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ಪೋತೆ. ಎಚ್. ಟಿ. (2007). ವಿಚಾರ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಭವನ, ಬೆಂಗಳೂರು.
- ಸಿದ್ಧರಾಮಯ್ಯ. ಎಸ್. ಜಿ. (2017). ಮತ್ತು ಇತರರು. ವಚನ ಮಾರ್ಗ. ಅಲ್ಲಮಪ್ರಭು ಸಂಶೋಧನಾ ಕೇಂದ್ರ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ.
- ಕಲಬುರ್ಗಿ. ಎಂ. ಎಂ. (2010). ಮಾರ್ಗ 1, 5, ಸಂ. ಸಪ್ನ ಬುಕ್ ಹೌಸ್, ಬೆಂಗಳೂರು.
- ಗಂಗಾಧರಯ್ಯ. ಎಸ್. ಎಂ. (2018). ವಚನ ಪ್ರತಿಭೆ ಮತ್ತು ಬೌದ್ಧಿಕ ಸ್ವಾತಂತ್ರ್ಯ. ಪವಿತ್ರ ಸಲ್ಯೂಷನ್ಸ್, ಬೆಂಗಳೂರು.